## ನಿಮ್ಮೊಡನೆ

# ಸ್ವಸ್ಥ ಕುಟುಂಬಕ್ಕಾಗಿ ಹೆಣ್ಣಿನ ಆರ್ಥಿಕ ಸ್ವಾವಲಂಬನೆ ಹಾಗೂ ಗೃಹಕೃತ್ಯಗಳ ಸಮಾನ ಹಂಚಿಕೆ ಅಗತ್ಯ

**ಗೃಹಕೃತ್ಯ ಹೆಣ್ಣಿನದು, ಹಣಕಾಸಿನ ದುಡಿಮೆ ಗಂಡಿನದು ಎನ್ನುವ ನಂಬಿಕೆಯನ್ನು ಪರಂಪರೆ–ಸಂಸ್ಕೃತಿ ಹೆಸರಿನಲ್ಲಿ ಚಾಲ್ತಿಯಲ್ಲಿಡುವುದನ್ನು ಇನ್ನಾದರೂ ಕೊನೆಗೊಳಿಸಬೇಕು. ಗೃಹಕೃತ್ಯವನ್ನು ಕರ್ತವ್ಯ ಅಥವಾ ತ್ಯಾಗದ ರೂಪದಲ್ಲಿ ಬಿಂಬಿಸುವ ಮನಸ್ಥಿತಿಯಿಂದಲೂ ಸಮಾಜ ಹೊರಬರಬೇಕಾಗಿದೆ.**

ಭಾರತೀಯ ಕುಟುಂಬ ವ್ಯವಸ್ಥೆಯ ಆಧಾರಸ್ತಂಭ ಹೆಣ್ಣು. ಮನೆಯ ಒಳಗೆ ಹಾಗೂ ಹೊರಗೆ ಗಂಡು ಉತ್ಸವಮೂರ್ತಿಯಂತೆ ಕಾಣಿಸಿಕೊಂಡರೂ, ಕುಟುಂಬವನ್ನು ಪೊರೆಯುವ ನಿಟ್ಟಿನಲ್ಲಿ ಹೆಣ್ಣಿನ ಪಾತ್ರ ದೊಡ್ಡದು, ಮಹತ್ವದ್ದು. ಆದರೆ, ಗೃಹಿಣಿಯ ಈ ಶ್ರಮ ಹಾಗೂ ತ್ಯಾಗಕ್ಕೆ ಹಣಕಾಸಿನ ಮೌಲ್ಯವೂ ಇದೆ ಎನ್ನುವುದನ್ನು ನಮ್ಮ ಸಮಾಜ ಗುರ್ತಿಸಿಲ್ಲ. ಕುಟುಂಬ ವ್ಯವಸ್ಥೆ ಹೆಣ್ಣಿನ ಶ್ರಮವನ್ನು ಗೌರವ ಹಾಗೂ ಅನುಕಂಪದಿಂದ ನೋಡುತ್ತದೆಯೇ ಹೊರತು, ಅದಕ್ಕೆ ಹಣಕಾಸಿನ ಆಯಾಮ ಇದೆಯೆಂದು ಭಾವಿಸಿಲ್ಲ. ರೂಪಾಯಿ ಲೆಕ್ಕದ ಗಂಡಿನ ದುಡಿಮೆಯ ಮುಂದೆ ಗೃಹಿಣಿಯ ಅಪಾರ ಶ್ರಮ ಹಾಗೂ ತ್ಯಾಗ ಬಹುತೇಕ ಸಂದರ್ಭಗಳಲ್ಲಿ ಕಿಮ್ಮತ್ತು ಕಳೆದುಕೊಂಡಂತೆ ಕಾಣಿಸುವುದು ನಮ್ಮ ಕುಟುಂಬ ವ್ಯವಸ್ಥೆಯಲ್ಲಿ ಆಗಬೇಕಾಗಿರುವ ಸುಧಾರಣೆಯನ್ನು ಸೂಚಿಸುವಂತಿದೆ.

ಲಿಂಗ ಸಮಾನತೆಯ ಬಗ್ಗೆ ಉತ್ಸಾಹದಿಂದ ಮಾತನಾಡುವ ವರ್ತಮಾನದಲ್ಲೂ ಹುಡುಗಿಯರನ್ನು ಆರ್ಥಿಕವಾಗಿ ಸ್ವಾವಲಂಬಿ ಆಗಿಸುವುದಕ್ಕಿಂತಲೂ ಯಶಸ್ವೀ ಗೃಹಿಣಿಯ ರೂಪದಲ್ಲಿ ನೋಡುವುದು ಬಹುತೇಕ ಪೋಷಕರ ಹಂಬಲವಾಗಿದೆ. ಹುಡುಗಿಯರು ಉನ್ನತ ಶಿಕ್ಷಣ ಪಡೆದರೂ, ಉನ್ನತ ನೌಕರಿಗೇರಿದರೂ ಕುಟುಂಬದ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದು ಅಸಾಧ್ಯ ಎನ್ನುವಂಥ ಜಟಿಲ ಸಾಮಾಜಿಕ ವ್ಯವಸ್ಥೆ ನಮ್ಮದು. ಕಚೇರಿ ಮತ್ತು ಮನೆಯ ನಡುವೆ ಹೊಯ್ದಾಡುವ ಹೆಣ್ಣು, ಎರಡೂ ಕ್ಷೇತ್ರಗಳಲ್ಲಿ ಸಮತೋಲನ ಸಾಧಿಸಬೇಕಾಗುತ್ತದೆ. ಈ ಸಮತೋಲನದ ಕಸರತ್ತು ಗಂಡಿಗಿಲ್ಲ. ಕಚೇರಿಯಲ್ಲಿ ದುಡಿದು ಹೈರಾಣಾಗುವ ಗಂಡು, ಕುಟುಂಬದ ಜವಾಬ್ದಾರಿಯನ್ನೆಲ್ಲ ಹೆಣ್ಣಿನ ಹೆಗಲಿಗೆ ಬಹು ಸುಲಭವಾಗಿ ವರ್ಗಾಯಿಸಿಬಿಡುತ್ತಾನೆ; ಅದನ್ನು ತನ್ನ ಹಕ್ಕೆಂದು ಭಾವಿಸುತ್ತಾನೆ.

ಸಂಸಾರವನ್ನು ಚಂದವಾಗಿಸುವುದಕ್ಕೆ ಸೀಮಿತಗೊಳ್ಳುವ ಹೆಣ್ಣುಮಕ್ಕಳು ಹಣಕಾಸಿಗೆ ಸಂಬಂಧಿಸಿದಂತೆ ಗಂಡನನ್ನು ಅವಲಂಬಿಸಬೇಕಾಗುತ್ತದೆ. ಈ ಅವಲಂಬನೆ ಗಂಡಿನ ಅಹಂಕಾರಕ್ಕೆ ಕಾರಣವಾಗುವುದಿದೆ. ಈ ಪುರುಷ ಅಹಂಕಾರದ ವಿರುದ್ಧ ಇತ್ತೀಚಿನ ದಿನಗಳಲ್ಲಿ ಜಾಗೃತಿ ರೂಪುಗೊಳ್ಳುತ್ತಿರುವುದು ಗಮನಾರ್ಹ. ಆರ್ಥಿಕ ಸ್ವಾವಲಂಬನೆ ಗಂಡನ ಮೇಲಿನ ಅವಲಂಬನೆಯನ್ನು ತಪ್ಪಿಸುವುದರ ಜೊತೆಗೆ, ಹೆಣ್ಣಿಗೆ ಆತ್ಮವಿಶ್ವಾಸವನ್ನೂ ನೀಡುತ್ತದೆ. ಲಿಂಗ ಸಮಾನತೆಯ ಹಾದಿಯಲ್ಲಿ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಬಹು ಮುಖ್ಯವಾದ ಹೆಜ್ಜೆ ಎನ್ನುವುದನ್ನು ಮರೆಯಬಾರದು. ಇದೀಗ, ಗೃಹಿಣಿಯ ಆರ್ಥಿಕ ಸ್ವಾವಲಂಬನೆಯ ಅಗತ್ಯವನ್ನು ಸುಪ್ರೀಂ ಕೋರ್ಟ್ ಕೂಡ ಪ್ರತಿಪಾದಿಸಿದೆ. ಸ್ವತಂತ್ರ ಆದಾಯದ ಮೂಲವಿಲ್ಲದ, ಹಣಕಾಸು ಪಡೆಯುವ ಸಹಜ ಅವಕಾಶವಿಲ್ಲದ, ಮುಖ್ಯವಾಗಿ ವೈಯಕ್ತಿಕವಾದ ಖರ್ಚು–ವೆಚ್ಚ ನಿಭಾಯಿಸಲೂ ಆಗದ ಗೃಹಿಣಿಯರ ದುರ್ಬಲ ಸ್ಥಿತಿಯನ್ನು ಕೋರ್ಟ್ ವಿಷಾದಭಾವದಲ್ಲಿ ಗಮನಿಸಿದೆ.

‘ಭಾರತದಲ್ಲಿ ವಿವಾಹಿತ ಮಹಿಳೆಯರ ಆರ್ಥಿಕ ಸಬಲೀಕರಣ ಮತ್ತು ಅವರಿಗೆ ಆರ್ಥಿಕ ಸ್ಥಿರತೆಯನ್ನು ಒದಗಿಸುವ ಅಗತ್ಯವಿದೆ’ ಎನ್ನುವುದು ಸುಪ್ರೀಂ ಕೋರ್ಟ್ ಸ್ಪಷ್ಟ ಅಭಿಪ್ರಾಯ. ವಿಚ್ಛೇದಿತ ಮುಸ್ಲಿಂ ಮಹಿಳೆಯರಿಗೆ ಕಾನೂನು ಪ್ರಕಾರ ಜೀವನಾಂಶ ನೀಡುವ ಕುರಿತ ಪ್ರಕರಣದ ತೀರ್ಪಿನಲ್ಲಿ ಕೋರ್ಟ್ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಗೃಹಿಣಿಯರು ಆರ್ಥಿಕವಾಗಿ ಸ್ವಾವಲಂಬಿಗಳಾಗುವುದರಲ್ಲಿ ಎರಡು ಬಗೆಯ ಲಾಭವನ್ನು ಸುಪ್ರೀಂ ಕೋರ್ಟ್ ಗುರ್ತಿಸಿದೆ. ಮೊದಲನೆಯ ಉಪಯೋಗ, ಕುಟುಂಬದ ಅರ್ಥವ್ಯವಸ್ಥೆ ಉತ್ತಮಗೊಳ್ಳುತ್ತದೆ. ದೇಶದ ಆರ್ಥಿಕತೆಗೆ ಕೊಡುಗೆ ನೀಡುವ ಗೃಹಿಣಿಯರ ಸೇವೆ ಮತ್ತು ತ್ಯಾಗವನ್ನು ಗುರ್ತಿಸುವಂತಾಗುವುದು ಮತ್ತೊಂದು ಉಪಯೋಗ.

ಗೃಹಿಣಿಯರ ಆರ್ಥಿಕ ಸ್ವಾವಲಂಬನೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ವಿಚಾರಗಳು, ಕುಟುಂಬ ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿನ ದೃಷ್ಟಿಕೋನಗಳ ಬದಲಾವಣೆಗೆ ಪ್ರೇರಣೆ ಒದಗಿಸುವಂತಿವೆ. ಸ್ವತಂತ್ರ ಆದಾಯ ಮೂಲಗಳನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಗೃಹಿಣಿಯರಿಗೆ ಒತ್ತಾಸೆಯಾಗಿ ನಿಲ್ಲುವುದು ಗಂಡಿನ ಕರ್ತವ್ಯವೂ ಹೌದು. ಸಂಗಾತಿಯನ್ನು ಆರ್ಥಿಕವಾಗಿ ಸ್ವಾವಲಂಬಿಯನ್ನಾಗಿಸುವುದು ಮಾತ್ರವಲ್ಲ, ಸಂಸಾರದ ನಿರ್ವಹಣೆಯಲ್ಲಿನ ಹೊಣೆಯನ್ನು ಹಂಚಿಕೊಳ್ಳುವ ಪ್ರಜ್ಞಾವಂತಿಕೆಯನ್ನೂ ಗಂಡು ರೂಢಿಸಿಕೊಳ್ಳಬೇಕಾಗಿದೆ. ಗೃಹಿಣಿಗೆ ಸಮಾನಾರ್ಥಕವಾದ ಪದ ಗಂಡಿಗೆ ಸಂಬಂಧಿಸಿದಂತೆ ಇಲ್ಲ ಎನ್ನುವುದು ಗೃಹಕೃತ್ಯಗಳನ್ನು ಹೆಣ್ಣಿಗೆ ಸೀಮಿತಗೊಳಿಸಿರುವುದಕ್ಕೆ ಉದಾಹರಣೆಯಂತಿದೆ.

ಗೃಹಕೃತ್ಯ ಹೆಣ್ಣಿನದು, ಹಣಕಾಸಿನ ದುಡಿಮೆ ಗಂಡಿನದು ಎನ್ನುವ ನಂಬಿಕೆಯನ್ನು ಪರಂಪರೆ–ಸಂಸ್ಕೃತಿ ಹೆಸರಿನಲ್ಲಿ ಚಾಲ್ತಿಯಲ್ಲಿಡುವುದನ್ನು ಇನ್ನಾದರೂ ಕೊನೆಗೊಳಿಸಬೇಕು. ಗೃಹಕೃತ್ಯವನ್ನು ಕರ್ತವ್ಯ ಅಥವಾ ತ್ಯಾಗದ ರೂಪದಲ್ಲಿ ಬಿಂಬಿಸುವ ಮನಸ್ಥಿತಿಯಿಂದಲೂ ಸಮಾಜ ಹೊರಬರಬೇಕಾಗಿದೆ. ಹೆಣ್ಣನ್ನು ತ್ಯಾಗಮಯಿಯಾಗಿಸುವ ಗಂಡಿನ ನಡವಳಿಕೆಯಲ್ಲಿ ಬೇಜವಾಬ್ದಾರಿತನ, ಸೋಮಾರಿತನದ ಜೊತೆಗೆ ‘ತಾನು ಶ್ರೇಷ್ಠ’ ಎನ್ನುವ ಪುರುಷ ಅಹಂಕಾರವೂ ಇದೆ. ಈ ಅಹಂಕಾರದಿಂದ ಗಂಡು ಹೊರಗೆ ಬರುವುದು ಸಾಧ್ಯವಾದಲ್ಲಿ ಬಹುತೇಕ ಕೌಟುಂಬಿಕ ಸಮಸ್ಯೆಗಳು ತಿಳಿಯಾಗುವುದು ಸಾಧ್ಯವಿದೆ. ಹೆಣ್ಣಿನ ಆರ್ಥಿಕ ಸ್ವಾವಲಂಬನೆ ಸಾಧ್ಯವಾಗುವುದರ ಜೊತೆಗೆ ಗೃಹಕೃತ್ಯಗಳ ಸಮಾನ ಹಂಚಿಕೆಯಾಗುವುದೂ ಆರೋಗ್ಯಕರ ಕುಟುಂಬದ ಪ್ರಮುಖ ಲಕ್ಷಣವಾಗಿದೆ.

**■ ರಘುನಾಥ ಚ.ಹ.**


AI

ಈಶ್ವರ್